## ಸ್ವಯಂಪ್ರೇರಿತ ಸಮ್ಮತಿಯ ವ್ಯಾಖ್ಯೆ

ಸ್ವಯಂಪ್ರೇರಿತ ಸಮ್ಮತಿ ಎನ್ನುವುದು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದಕ್ಕೆ ಭಾಗವಹಿಸುವ ಎಲ್ಲರೂ ತಿಳಿದಿರುವ, ಸ್ವಯಂಪ್ರೇರಿತ ಮತ್ತು ಪರಸ್ಪರವಾದ ನಿರ್ಧಾರವಾಗಿದೆ. ಸಮ್ಮತಿಯನ್ನು ಶಬ್ದಗಳು ಅಥವಾ ಕ್ರಮಗಳ ಮೂಲಕ ನೀಡಬಹುದು, ಏಕೆಂದರೆ ಆ ಶಬ್ದಗಳು ಮತ್ತು ಕ್ರಮಗಳು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದಕ್ಕೆ ಸ್ಪಷ್ಟವಾದ ಅನುಮತಿಯನ್ನು ಒದಗಿಸುತ್ತವೆ. ಮೌನ ಅಥವಾ ಇದರಲ್ಲಿರುವಾಗ ಅಥವಾ ಹೊರಗೆ ಪ್ರತಿರೋಧ ಇಲ್ಲದೇ ಇರುವುದನ್ನು ಸಮ್ಮತಿ ಎಂದು ಪರಿಗಣಿಸುವಂತಿಲ್ಲ. ಭಾಗವಹಿಸುವವರ ಲಿಂಗ, ಲೈಂಗಿಕ ಪ್ರವೃತ್ತಿ, ಲೈಂಗಿಕ ಗುರುತು ಅಥವಾ ಲೈಂಗಿಕ ಅಭಿವ್ಯಕ್ತಿಯನ್ನು ಅವಲಂಬಿಸಿರುವುದಿಲ್ಲ.

ಯಾವುದೇ ಲೈಂಗಿಕ ಚಟುವಟಿಕೆಗೆ ಸಮ್ಮತಿ ಅಥವಾ ಯಾವುದೇ ಪಕ್ಷಗಳ ನಡುವಿನ ಅಥವಾ ಜೊತೆಗಿನ ಹಿಂದಿನ ಸಮ್ಮತಿಯಿರುವ ಲೈಂಗಿಕ ಚಟುವಟಿಕೆಯು ಯಾವುದೇ ಇತರ ಲೈಂಗಿಕ ಚಟುವಟಿಕೆಗೆ ಸಮ್ಮತಿ ಎಂದು ಪರಿಗಣಿಸಲ್ಪಡುವುದಿಲ್ಲ.

ಚಟುವಟಿಕೆಯನ್ನು ಆರಂಭಿಸುತ್ತಿರುವ ವ್ಯಕ್ತಿಯು ಮಾದಕವಸ್ತು ಮತ್ತು/ಅಥವಾ ಆಲ್ಕೋಹಾಲ್ ಅಡಿಯಲ್ಲಿಯೇ ಚಟುವಟಿಕೆಯನ್ನು ಮಾಡುತ್ತಿದ್ದರೂ ಸಮ್ಮತಿಯು ಅಗತ್ಯವಿರುತ್ತದೆ.

ಸಮ್ಮತಿಯನ್ನು ಆರಂಭದಲ್ಲಿ ಕೊಡಬಹುದಾಗಿದ್ದರೂ ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

ವ್ಯಕ್ತಿಯು ಅಸಮರ್ಥನಿರುವಾಗ ಸಮ್ಮತಿಯನ್ನು ನೀಡುವುದು ಸಾಧ್ಯವಿರುವುದಿಲ್ಲ, ಇದು ಸ್ವಯಂ ತಿಳಿದೂ ಲೈಂಗಿಕ ಚಟುವಟಿಕೆಯಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ವ್ಯಕ್ತಿಯು ಹೊಂದಿಲ್ಲದೇ ಇರುವಾಗ ಸಂಭವಿಸುತ್ತದೆ. ಸಾಮರ್ಥ್ಯವಿಲ್ಲದೇ ಇರುವಿಕೆಯು ಪ್ರಜ್ಞೆ ಇಲ್ಲದೇ ಇರುವುದು ಅಥವಾ ನಿದ್ರೆಗೆ ಒಳಗಾಗಿರುವುದು, ಸ್ವಯಂಪ್ರೇರಣೆ ಇಲ್ಲದೇ ಮಾಡದೇ ಇರುವುದು ಅಥವಾ ಒಂದು ವೇಳೆ ವ್ಯಕ್ತಿಯು ಸ್ವತಃ ಸಮ್ಮತಿ ನೀಡುವುದು ಸಾಧ್ಯವಿಲ್ಲದೇ ಇದ್ದಲ್ಲಿ ಸಂಭವಿಸಬಹುದು. ವಿಷಕಾರಿತ್ವ ಇಲ್ಲದೇ ಇರುವುದನ್ನು ಅವಲಂಬಿಸಿ, ಯಾರಾದರೂ ಆಲ್ಕೋಹಾಲ್, ಮಾದಕ ವಸ್ತುಗಳು ಅಥವಾ ಇತರ ವಿಷಕಾರಿ ಪದಾರ್ಥಗಳ ಪ್ರಭಾವಕ್ಕೆ ಒಳಗಾಗಿದ್ದಲ್ಲಿ ಅಸಮರ್ಥರಾಗಿದ್ದಾರೆ ಮತ್ತು ಸಮ್ಮತಿ ನೀಡಲು ಸಾಧ್ಯವಿಲ್ಲ ಎಂದು ಪರಿಗಣಿಸಬಹುದು.

ಸಮ್ಮತಿಯ ಫಲಿತಾಂಶವಾಗಿ ಯಾವುದೇ ಒತ್ತಾಯ, ಅಡ್ಡಿಪಡಿಸುವಿಕೆ, ಒತ್ತಡ ಅಥವಾ ಹಾನಿ ಮಾಡುವ ಬೆದರಿಕೆಯು ಉಂಟಾಗುವ ಸಾಧ್ಯತೆಯಿದ್ದಲ್ಲಿ ಸಮ್ಮತಿಯನ್ನು ನೀಡಲಾಗುವುದಿಲ್ಲ.

ಸಮ್ಮತಿಯನ್ನು ಹಿಂತೆಗೆದುಕೊಂಡಿರುವಾಗ ಅಥವಾ ಇದನ್ನು ನೀಡಲು ಸಾಧ್ಯವಿಲ್ಲದೇ ಇರುವಾಗ ಲೈಂಗಿಕ ಚಟುವಟಿಕೆಯನ್ನು ನಿಲ್ಲಿಸಬೇಕು.

## ಮಾದಕ ವಸ್ತು ಹಾಗೂ ಆಲ್ಕೋಹಾಲ್ ಬಳಕೆಯ ನಡವಳಿಕೆಯ ಶುಲ್ಕಗಳಿಂದ

Rockland Community College ನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಆರೋಗ್ಯ ಮತ್ತು ಸುರಕ್ಷತೆಯು ಅತ್ಯಂತ ಮಹತ್ವದ್ದಾಗಿರುತ್ತದೆ. RCC ಯು ಹಿಂಸೆಯ ಸಂದರ್ಭದಲ್ಲಿ ಗೃಹ ಹಿಂಸೆ, ಡೇಟಿಂಗ್ ಹಿಂಸೆ, ಹಿಂಬಾಲಿಸುವುದು ಅಥವಾ ಲೈಂಗಿಕ ದೌರ್ಜನ್ಯ ಒಳಗೊಂಡು ಆದರೆ ಇವುಗಳಿಗೆ ಸೀಮಿತವಾಗಿಲ್ಲದೇ ಇದ್ದರೂ ಕೂಡ ಮದ್ಯಪಾನ ಮಾಡುತ್ತಿರುವ ಮತ್ತು/ಅಥವಾ ಮಾದಕ

ವಸ್ತು ಸೇವನೆ ಮಾಡುವ (ಸ್ವಯಂಪ್ರೇರಿತ ಅಥವಾ ಸ್ವಯಂಪ್ರೇರಿತವಲ್ಲದ ಬಳಕೆಯಾಗಿದ್ದರೂ ಕೂಡ) ವಿದ್ಯಾರ್ಥಿಗಳನ್ನು, ಅಂತಹವರು ತಮ್ಮದೇ ನಡವಳಿಕೆಗಳ ಕಾರಣದಿಂದ ಉಂಟಾಗಬಹುದಾದ ಪರಿಣಾಮಗಳಿಗೆ ಸಂಭಾವ್ಯವಾಗಿ ಹಿಂಜರಿಯುತ್ತಿದ್ದರೂ ಕೂಡ ಅಂತಹ ಸಂದರ್ಭದಲ್ಲಿ ಗುರುತಿಸುತ್ತದೆ. RCC ಯು ವಿದ್ಯಾರ್ಥಿಗಳಿಗೆ ಗೃಹ ಹಿಂಸೆ, ಡೇಟಿಂಗ್ ಹಿಂಸೆ, ಹಿಂಬಾಲಿಸುವುದು ಅಥವಾ ಲೈಂಗಿಕ ದೌರ್ಜನ್ಯಗಳನ್ನು ಸಂಸ್ಥೆಯ ಅಧಿಕಾರಿಗಳಿಗೆ ತಿಳಿಸುವಂತೆ ಬಲವಾಗಿ ಪ್ರೋತ್ಸಾಹಿಸುತ್ತದೆ. ಗೃಹ ಹಿಂಸೆ, ಡೇಟಿಂಗ್ ಹಿಂಸೆ, ಹಿಂಬಾಲಿಸುವುದು ಅಥವಾ ಲೈಂಗಿಕ ದೌರ್ಜನ್ಯಗಳ ಸಂದರ್ಭದಲ್ಲಿ ಹತ್ತಿರವಿರುವ ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡುತ್ತಿರುವ ಮೂರನೇ ವ್ಯಕ್ತಿಯು ಗೃಹ ಹಿಂಸೆ, ಡೇಟಿಂಗ್ ಹಿಂಸೆ, ಹಿಂಬಾಲಿಸುವುದು ಅಥವಾ ಲೈಂಗಿಕ ದೌರ್ಜನ್ಯಗಳನ್ನುRCC ಅಧಿಕಾರಿಗಳಿಗೆ ಅಥವಾ ಕಾನೂನು ಜಾರಿ ಅಧಿಕಾರಿಗಳಿಗೆ ತಿಳಿಸುವುದು RCC's ನಡಾವಳಿ ಸಂಹಿತೆಯ ಮದ್ಯಪಾನದ ಮತ್ತು/ಅಥವಾ ಮಾದಕ ದ್ರವ್ಯ ಬಳಕೆಯ ನೀತಿಗಳ ಉಲ್ಲಂಘನೆಗಳ ಕ್ರಮಗಳಿಗೆ ಒಳಗಾಗುವುದಿಲ್ಲ.

## ವಿದ್ಯಾರ್ಥಿಯ ಹಕ್ಕುಗಳ ಮಸೂದೆ

ಎಲ್ಲ ವಿದ್ಯಾರ್ಥಿಗಳೂ ಕೂಡ ಇವುಗಳಿಗೆ ಹಕ್ಕು ಹೊಂದಿರುತ್ತಾರೆ:

ಸ್ಥಳೀಯ ಕಾನೂನು ಜಾರಿ ಮತ್ತು/ಅಥವಾ ರಾಜ್ಯ ಪೋಲಿಸ್‌ಗೆ ವರದಿ ಮಾಡುವುದು;

ಗೃಹ ಹಿಂಸೆ, ಡೇಟಿಂಗ್ ಹಿಂಸೆ, ಹಿಂಬಾಲಿಸುವುದು ಅಥವಾ ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿ ಬಹಿರಂಗಪಡಿಸುವಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದು;

ಅಪರಾಧ ಅಥವಾ ಉಲ್ಲಂಘನೆಯನ್ನು ಬಹಿರಂಗಗೊಳಿಸದೇ ಇರುವುದೇ ಅಥವಾ ಬೇಡವೇ ಎಂದು ನಿರ್ಧಾರ ಮಾಡುವುದು ಮತ್ತು ಸಂಸ್ಥೆಯ ಒತ್ತಡದಿಂದ ಮುಕ್ತವಾದ ನ್ಯಾಯಿಕ ಅಥವಾ ನಡಾವಳಿ ಪ್ರಕ್ರಿಯೆಯಲ್ಲಿ ಮತ್ತು/ಅಥವಾ ಅಪರಾಧಿಕ ನ್ಯಾಯಿಕ ಪ್ರಕ್ರಿಯೆಯಲ್ಲಿ ಭಾಗವಹಿಸುವುದು;

ನ್ಯಾಯಯುತವಾಗಿರುವ, ನಿಷ್ಪಕ್ಷಪಾತ ಮತ್ತು ಸೂಕ್ತ ನೋಟಿಸು ನೀಡಿ ಮಂಡಿಸುವುದಕ್ಕೆ ಅರ್ಥಪೂರ್ಣ ಅವಕಾಶವನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

ಘನತೆಯೊಂದಿಗೆ ನಡೆಸಿಕೊಳ್ಳುವುದು ಮತ್ತು ಸಂಸ್ಥೆಯಿಂದ ಸೌಜನ್ಯಯುತ, ನ್ಯಾಯಯುತ ಮತ್ತು ಗೌರವಯುತವಾದ ಆರೋಗ್ಯ ಕಾಳಜಿ ಹಾಗೂ ಸಮಾಲೋಚನಾ ಸೇವೆಗಳನ್ನು, ಲಭ್ಯವಿರುವಂತೆ ಪಡೆಯುವುದು;

ಈ ಅಪರಾಧಗಳನ್ನು ಮತ್ತು ಉಲ್ಲಂಘನೆಗಳನ್ನು ನಡೆಸಿರುವ ವೇಳೆಯಲ್ಲಿ ವರದಿ ಮಾಡುತ್ತಿರುವ ವ್ಯಕ್ತಿಯು ದೋಷಪೂರಿತವಾಗಿದ್ದಾನೆ ಅಥವಾ ಅಂತಹ ಅಪರಾಧಗಳು ಅಥವಾ ಉಲ್ಲಂಘನೆಗಳನ್ನು ತಪ್ಪಿಸಲು ಬೇರೆ ವಿಧಾನದಲ್ಲಿ ಕ್ರಮ ಕೈಗೊಳ್ಳಬಹುದು ಎನ್ನುವ ಯಾವುದೇ ಸಲಹೆಗಳಿಂದ ಮುಕ್ತವಾಗಿರುವುದು;

ಪ್ರಾಯೋಗಿಕವಾಗಿ ಸಾಧ್ಯವಿರುವಂತೆ ಎಷ್ಟು ಕಡಿಮೆ ಸಾಧ್ಯವೋ ಅಷ್ಟು ಕಡಿಮೆ ಸಂಸ್ಥೆಗಳ ಪ್ರತಿನಿಧಿಗಳಿಗೆ ಘಟನೆಯನ್ನು ವಿವರಿಸುವುದು ಮತ್ತು ಘಟನೆಯ ವಿವರಣೆಯನ್ನು ಅನಗತ್ಯವಾಗಿ ಪುನರಾವರ್ತಿಸದೇ ಇರುವುದು.

ಸಂಸ್ಥೆಯ ವ್ಯಾಪ್ತಿಯ ಒಳಗಡೆಯಲ್ಲಿ ಸಂಸ್ಥೆ, ಯಾವುದೇ ವಿದ್ಯಾರ್ಥಿ, ಅಪರಾಧಿ ಮತ್ತು/ಅಥವಾ ಪ್ರತಿಕ್ರಿಯೆದಾರರಿಂದ ಮತ್ತು/ಅಥವಾ ಸ್ನೇಹಿತರಿಂದ, ಕುಟುಂಬದಿಂದ ಮತ್ತು ಸಂಬಂಧಿಗಳಿಂದ ಯಾವುದೇ ಸೇಡು ತೀರಿಸಿಕೊಳ್ಳುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು;

ಕನಿಷ್ಠ ಒಂದು ಮಟ್ಟದ ನಿರ್ಧಾರ ಮಾಡುವಿಕೆಯ ಆಪೀಲ್ ಅನ್ನು ಪಡೆಯುವುದಕ್ಕೆ ಅವಕಾಶ;

ಎಲ್ಲ ಸಭೆಗಳು ಹಾಗೂ ಅಂತಹ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರಣೆಗಳನ್ನು ಒಳಗೊಂಡು ನ್ಯಾಯಿಕ ಅಥವಾ ನಡಾವಳಿ ಪ್ರಕ್ರಿಯೆ ಉದ್ದಕ್ಕೂ ವರದಿ ಮಾಡಿಕೊಳ್ಳುವ ವ್ಯಕ್ತಿಗೆ, ಆರೋಪಿಗೆ ಮತ್ತು ಪ್ರತಿವಾದಿಗೆ ಸಲಹೆ ಮಾಡುವ ಹಾಗೂ ಸಹಾಯ ನೀಡುವ ಸಲಹೆಗಾರರ ಜೊತೆಯಲ್ಲಿ ಬರುವುದಕ್ಕೆ ಅವಕಾಶವಿರುತ್ತದೆ;

ಪರಿಶೋಧನಾತ್ಮಕ, ಆಪರಾಧಿಕ ನ್ಯಾಯ ಅಥವಾ ನ್ಯಾಯಿಕ ಅಥವಾ ಸಂಸ್ಥೆಯ ನಡಾವಳಿಯ ಪ್ರಕ್ರಿಯ ಉದ್ದಕ್ಕೂ ಹಸ್ತಕ್ಷೇಪ ರಹಿತ ನಾಗರಿಕ  ಹಾಗೂ ಧಾರ್ಮಿಕ ಹಕ್ಕುಗಳ ಆಚರಣೆಗೆ ಅವಕಾಶ.

ಜನಾಂಗ, ವರ್ಣ, ರಾಷ್ಟ್ರೀಯತೆ, ಧರ್ಮ, ಜನಾಂಗೀಯ ಮೂಲ, ವಯಸ್ಸು, ಅಂಗವೈಕಲ್ಯ, ಲಿಂಗ, ಲೈಂಗಿಕ ಗುರುತು ಅಥವಾ ಅಭಿವ್ಯಕ್ತಿ, ಲೈಂಗಿಕ ಪ್ರವೃತ್ತಿ, ಕೌಟುಂಬಿಕ ಸ್ಥಿತಿ, ಗರ್ಭಾವಸ್ಥೆ, ಮೊದಲಿಂದಲೇ ಇರುವ ವಂಶವಾಹಿ ಗುಣಗಳು, ಸೈನಿಕ ಸ್ಥಿತಿ, ಗೃಹ ದೌರ್ಜನ್ಯಕ್ಕೆ ತುತ್ತಾಗಿರುವ ಸ್ಥಿತಿ ಅಥವಾ ಅಪರಾಧಿಕ ಸಾಬೀತಾಗುವಿಕೆಯ ಪರಿಗಣನೆ ಇಲ್ಲದೇ ಮತ್ತು ಹಿಂಸೆ ಅಥವಾ ಉಲ್ಲಂಘನೆಯು ಕ್ಯಾಂಪಸ್‌ನಲ್ಲಿ, ಕ್ಯಾಂಪಸ್ ಹೊರಗೆ ಅಥವಾ ವಿದೇಶದಲ್ಲಿ ಓದುತ್ತಿರುವಾಗ ಸಂಭವಿಸಿದೆಯೇ ಎನ್ನುವುದರ ಪರಿಗಣನೆ ಇಲ್ಲದೇ ಹಕ್ಕುಗಳು ಅನ್ವಯವಾಗುತ್ತವೆ.

ನೀವು ವಿಶ್ವವಿದ್ಯಾಲಯದ ಪೋಲಿಸ್ ಅಥವಾ ಕ್ಯಾಂಪಸ್ಸಿನ ಸೆಕ್ಯುರಿಟಿ, ಸ್ಥಳೀಯ ಕಾನೂನು ಜಾರಿ ಪ್ರಾಧಿಕಾರ ಮತ್ತು/ಅಥವಾ ರಾಜ್ಯ ಪೋಲಿಸ್ ಗೆ ವರದಿ ಮಾಡುವುದಕ್ಕೆ ಅಥವಾ ವರದಿ ಮಾಡದೇ ಇರಲು ಆಯ್ದುಕೊಳ್ಳುವುದಕ್ಕೆ; ನಿಮ್ಮ ಸಂಸ್ಥೆಗೆ ಘಟನೆಯನ್ನು ವರದಿ ಮಾಡುವುದಕ್ಕೆ; ಘಟನೆಯ ವಿರುದ್ಧ ಸೇಡು ತೀರಿಸಿಕೊಳ್ಳುವವರಿಂದ ಸಂಸ್ಥೆಯಿಂದ ರಕ್ಷಣೆ ಪಡೆಯುವುದಕ್ಕೆ; ಮತ್ತು ನಿಮ್ಮ ಸಂಸ್ಥೆಯಿಂದ ಸಹಾಯ ಹಾಗೂ ನೆರವನ್ನು ಪಡೆಯುವುದಕ್ಕೆ ಹಕ್ಕು ಹೊಂದಿರುತ್ತೀರಿ.